# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 825/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತ 2 : ಬಳಿರಾಮ ತಂದೆ ನಾರಾಯಣ ಲೊಂಡಿ,
ವಯಸ್ಸು : **63** ವರ್ಷ, ವೃತ್ತಿ : ಕೃಷಿ ಕೆಲಸ,
ಸಾಃ ಬಿ.ಕೆ.ಹಳ್ಳಿ, ಹಳಿಯಾಳ.

## <u>ದೋಷಾರೋಪಣೆ</u>

ನಾನು ದೇಶಭೂಷಣ ಕೌಜಲಗಿ, ಬಿ.ಎ.ಎಲ್.ಎಲ್.ಬಿ., ಪ್ರ.ದ.ನ್ಯಾದಂ. ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೊಷಾರೋಪಣೆ ಏನೆಂದರೆ,

ದಿನಾಂಕ 09-05-2022 ರಂದು ಮಧ್ಯಾಹ್ನ 03-30 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಬಿ ಕೆ ಹಳ್ಳಿ ಗ್ರಾಮದಲ್ಲಿ ಪಿರ್ಯಾದಿಯವರ ಮನೆತನದ ಬಾಬ್ತು ಜಮೀನು ಸರ್ವೇ ನಂಬರ **310** ರಲ್ಲಿ ಕೃಷಿ ಕೆಲಸ ಮಾಡುತ್ತಿರುವಾಗ ಆರೋಪಿಯಾದ ನೀನು ಪಿರ್ಯಾದಿಯವರ ಹೊಲದಲ್ಲಿ ಹೋಗಿ, ಪಿರ್ಯಾದಿಯನ್ನು ಉದ್ದೇಶಿಸಿ ಏ ರಾಂಡೇಚಾ, ಸರ್ವೇ ನಂಬರ **260** ರ ಜಮೀನದಲ್ಲಿ ನನಗೂ ಪಾಲು ಕೊಡ್ತಿರೋ ಇಲ್ಲಾ ನಿಮಗೆ ಒಂದು ಗತಿ ಕಾಣಿಸಲೋ ಎಂದು ಬೈದಾಡುತ್ತಿದ್ದಾಗ, ಪಿರ್ಯಾದಿ ಯಾಕೇ ಹೊಲಸು ಬೈದಾಡುತ್ತೀಯಾ ನಮ್ಮ ತಂದೆಯವರೊಂದಿಗೆ ಮಾತಾಡು, ನಿನಗೆ ಬಂದರೆ ನೀನು ತಗೋ ಜಗಳ ಮಾಡಬೇಡಾ ಎಂದು ಹೇಳಿದ್ದಕ್ಕೆ, ಚೀನಾಲೀ ಮಗನಾ ನನಗೆ ಬುದ್ಧಿ ಹೇಳ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವರ ಶಾಂತಿಗೆ ಭಂಗ ಉಂಟು ಮಾಡಿ ಅವರನ್ನು ನಿಂದಿಸುವ ಮೂಲಕ ನೀವು ಭಾ.ದಂ.ಸಂ.ಕಲಂ.**504** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಎರಡನೇಯದಾಗಿ, ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಹೊಲದಲ್ಲಿ ಬಿದ್ದಿದ್ದ ಒಂದು ಕಲ್ಲು ತೆಗೆದುಕೊಂಡು ಪಿರ್ಯಾದಿಯ ಬಲಬದಿ ಭುಜಕ್ಕೆ, ಬಲಗಾಲ ಪಾದಕ್ಕೆ ಮತ್ತು ಎಡಬದಿ ಕಿವಿಗೆ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ನೀವು ಭಾ.ದಂ.ಸಂ.ಕಲಂ.324 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಕೊನೆಯದಾಗಿ ಆರೋಪಿಯಾದ ನೀವು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಯನ್ನು ಉದ್ದೇಶಿಸಿ "ಇವತ್ತು ಬಿಟ್ಟಿದ್ದೇನೆ ಮಗನೇ ನನಗೆ ಜಮೀನು ಕೊಡದಿದ್ದರೆ ನಿಮಗೆ ತೋರಿಸುತ್ತೇನೆ " ಎಂದು ಜೀವ ಬೇದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ.506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

(ಆರೋಪಿಯು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು ).

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಬೇಕೆಂದು ನಿರ್ದೇಶಿಸುತ್ತೇನೆ .

ಸ್ಥಳ : ಹಳಿಯಾಳ.
ದಿನಾಂಕ : 25-11-2023. ಪ್ರ.ದ.ನ್ಯಾದಂ., ಹಳಿಯಾಳ.